ದಿಃ **14-07-2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್ ಎಂ ಬಿ ರವರಿಂದಃ

ದಾವಾ ಅನುಸೂಚಿ ಸ್ವತ್ತಿನ ಕುರಿತು ಪ್ರತಿವಾದಿ ನಂ.1 ಮತ್ತು ನನ್ನ ನಡುವೆ ಈಗಿರುವ ಕ್ರಯಕರಾರು ಪತ್ರವನ್ನು ಹೊರತು ಪಡಿಸಿ ಬೇರೆ ಕ್ರಯಕರಾರು ಪತ್ರ ಆಗಿತ್ತು ಎಂದರೆ ಸರಿಯಲ್ಲ. 2006 ರಿಂದ 2008 ರ ಅವಧಿಯ ವರೆಗೆ ನನ್ನ ಮತ್ತು ಪ್ರತಿವಾದಿ ನಂ.1 ರವರ ಮಧ್ಯೆ ಕ್ರಯಕರಾರು ಪತ್ರ ಆಗಿತ್ತು ಎಂದರೆ ಸಾಕ್ಷಿಯು ನಮಗೆ ಹೊಲ ಮಾಡಲು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಕ್ರಯಕರಾರು ಪತ್ರ ನೊಂದು ಆಗಿತ್ತು ಎಂದರೆ ಸರಿ. 2008 ರಿಂದ 2011 ರ ಅವಧಿಯಲ್ಲಿ 3 ವರ್ಷದ ಅವಧಿಯ ಸಲುವಾಗಿ ಇನ್ನೊಂದು ಕ್ರಯಕರಾರು ಪತ್ರ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ 2 ಲಕ್ಷ 60 ಸಾವಿರ ರೂಪಾಯಿಗಳಿಗೆ ಮಾತುಕತೆ ಆಗಿ ರೂ.2,50,000/- ಮುಂಗಡ ನೀಡಿರುವ ಕುರಿತು ಕ್ರಯಕರಾರು ಪತ್ರ ಆಗಿತ್ತು ಎಂದರೆ ಸರಿಯಲ್ಲ. ಸದರಿ ಕ್ರಯಕರಾರು ಪತ್ರವು ಸಹ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದು ಸಹ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 06-06-2008 ನೇ ಇಸವಿಯಲ್ಲಿ ಆದ ಕ್ರಯ ಕರಾರು ಪತ್ರದ ಧೃಡೀಕೃತ ನಕಲನ್ನು ಪ್ರತಿವಾದಿಯರ ಪರ ವಕೀಲರು ಮುಖಬಲೆ ಮಾಡಿಸಿದ್ದು ಸಾಕ್ಷಿಯು ಅದರಲ್ಲಿರುವ ತಮ್ಮ ಭಾವಚಿತ್ರ ಹಾಗೂ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಕ್ರಯಕರಾರು ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ನಿಡಿ-1-ಎ ಎಂದು ಗುರುತಿಸಲಾಯಿತು. ನಿಡಿ-1 ರ ದಾಖಲೆಯಂತೆ ನನ್ನ ಮತ್ತು ಪ್ರತಿವಾದಿ ನಂ.1 ರವರ ಮಧ್ಯೆ ಕ್ರಯ ಕರಾರು ಪತ್ರ ಆಗಿತ್ತು ಎಂದರೆ ಸರಿ.

2011 ರಿಂದ 2014 ರ ಅವಧಿಯಲ್ಲಿ ನನ್ನ ಮತ್ತು ಪ್ರತಿವಾದಿ ನಂ.1 ರವರ ಮಧ್ಯೆ ಇನ್ನೊಂದು ಕ್ರಯ ಕರಾರು ಪತ್ರ ಆಗಿತ್ತು ಎಂದರೆ ಸಾಕ್ಷಿಯು ನಮಗೆ ವ್ಯವಸಾಯ ಮಾಡಲು ಹಾಕಿದ್ದರು ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ನಂ.1 ರವರಿಗೆ ಬಡ್ಡಿ ವ್ಯವಹಾರದ ಭದ್ರತೆಗಾಗಿ ಕ್ರಯ ಕರಾರು ಪತ್ರ ಮಾಡಿಸಿಕೊಳ್ಳುವ ಹವ್ಯಾಸ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ನಮ್ಮೂರಿನಲ್ಲಿ ಅವಶ್ಯವಿದ್ದವರಿಗೆ ಕ್ರಯ ಕರಾರು ಪತ್ರ ಮಾಡಿಕೊಂಡು ಬಡ್ಡಿಗಾಗಿ ಹಣ ನೀಡುತ್ತೇನೆ ಎಂದರೆ ಸರಿಯಲ್ಲ.

ನನಗೆ ಕಬ್ಬಿನ ಬಿಲ್ಲು ಬಂದ ಹಣದಲ್ಲಿ ನಾನು ಪ್ರತಿವಾದಿ ನಂ.1 ರವರಿಗೆ ಮುಂಗಡವಾಗಿ ರೂ.3,15,000/- ಹಣ ನೀಡಿರುತ್ತೇನೆ. ಈಗ ನನಗೆ ಕಬ್ಬಿನ ಬಿಲ್ಲು ಹಾಜರುಪಡಿಸಲು ಆಗುವುದಿಲ್ಲ. ನನಗೆ ಸೇರಿದ ಸರ್ವೆ ನಂ.107 ರ ಜಮೀನಿನಲ್ಲಿನ ಕಬ್ಬಿನ ಮಾರಾಟದ ಹಣ ನಾನು ಪ್ರತಿವಾದಿ ನಂ.1 ರವರಿಗೆ ಮುಂಗಡ ನೀಡಿರುತ್ತೇನೆ. ಸರ್ವೆ ನಂ.107 ಇದು ಒಣ ಬೇಸಾಯದ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಬಳಿ ಕಬ್ಬು ಕಳುಹಿಸಿರುವ ಕುರಿತು ಬಿಲ್ಲುಗಳು ಇರುತ್ತವೆ. ಸದರಿ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿ ನಂ.1 ರವರಿಗೆ ಮುಂಗಡ ಹಣವಾಗಿ ರೂ.3,15,000/- ಯಾವತ್ತೂ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತು.

ದಾವಾ ಅನುಸೂಚಿ 1 ಸರ್ವೆ ನಂ.108/2 ಅ ಇದರ ಚಕ್ಕುಬಂದಿ

ಪೂರ್ವಕ್ಕೆ - ವೀರಭದ್ರ ಸಿದ್ದಪ್ಪ ಬೆಳಕೂಡ್ ರವರ ಜಮೀನು

ಪಶ್ಚಿಮಕ್ಕೆ - ಕಸ್ತೂರಿ ರಾಮಪ್ಪ ದಂಡಿನ್ ರವರ ಜಮೀನು
ಉತ್ತರಕ್ಕೆ - ಭೀಮಪ್ಪ ರಾಮಪ್ಪ ರಾಜಪೂರೆ ಇವರ ಜಮೀನು
ದಕ್ಷಿಣಕ್ಕೆ - ನನ್ನ ಸರ್ವೆ ನಂ.107 ರ ಜಮೀನು ಇರುತ್ತದೆ.

ದಾವಾ ಅನುಸೂಚಿ 2 ಸರ್ವೆ ನಂ.245/6 ಬ ಇದರ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಅದರಂತೆ ದಾವಾ ಅನುಸೂಚಿ 3 ಸರ್ವೆ ನಂ.245/6 ಎ ಇದರ ಜಮೀನಿನ ಚಕ್ಕುಬಂದಿ ನನಗೆ ಪ್ರತಿವಾದಿ ನಂ.1 ರವರು ಹೇಳಿರುವುದಿಲ್ಲ. ದಾವಾ ಅನುಸೂಚಿ 3 ರ ಜಮೀನಿನ ಚಕ್ಕುಬಂದಿ ನಾನು ಪ್ರತಿವಾದಿ ನಂ.1 ರವರಿಗೆ ಕೇಳಿರುವುದಿಲ್ಲ. ಈಗಲೂ ನನಗೆ ದಾವಾ ಅನುಸೂಚಿ 2 ಮತ್ತು 3 ರ ಜಮೀನುಗಳ ಚಕ್ಕುಬಂದಿ ಗೊತ್ತಿಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ನಾನು ನಮ್ಮ ವಕೀಲರಿಗೆ ದಾವಾ ಅನುಸೂಚಿ 1 ರಿಂದ 3 ಜಮೀನುಗಳ ಚಕ್ಕುಬಂದಿ ಹೇಳಿರುವುದಿಲ್ಲ. ದಾವಾ ಅನುಸೂಚಿ 1 ರಿಂದ 3 ಜಮೀನುಗಳ ಚಕ್ಕುಬಂದಿ ತಿಳಿಸದೇ ದಾವೆ ಸಲ್ಲಿಸಿರುವುದು ನಿಲ್ಲುವಂತದ್ದಲ್ಲ ಎಂದರೆ ಸರಿಯಲ್ಲ.

ಪಾಮಲದಿನ್ನಿ ಗ್ರಾಮದಲ್ಲಿ ಒಂದು ಎಕರೆ ಜಮೀನಿಗೆ ಈಗ 40 ಲಕ್ಷ ರೂಪಾಯಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಾನು ವ್ಯವಹಾರ ಮಾಡುವ ಸಮಯದಲ್ಲಿ ಅಷ್ಟು ಬೆಲೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳ ಒಟ್ಟು ಮಾರುಕಟ್ಟೆ ಬೆಲೆ ರೂ.80 ಲಕ್ಷಕ್ಕಿಂತ ಹೆಚ್ಚಿಗೆ ಆಗುತ್ತದೆ ಎಂದರೆ ಸರಿಯಲ್ಲ. 2011 ರಲ್ಲಿ ಪಾಮಲದಿನ್ನಿ ಗ್ರಾಮದಲ್ಲಿ 1 ಎಕರೆ ಜಮೀನಿಗೆ 20 ರಿಂದ 25 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ.

ದಿಃ 30-10-2006 ರಂದು ರೂ.1,20,000/- ಗಳಿಗೆ ಕ್ರಯ ಕರಾರು ಪತ್ರ ಪ್ರತಿವಾದಿ ನಂ.1 ರವರ ಕಡೆಯಿಂದ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಅದರಂತೆ 2008 ನೇ ಸಾಲಿನಲ್ಲಿ ದಾವಾ ಅನುಸೂಚಿ ಸ್ವತ್ತುಗಳ ಕುರಿತು ಪ್ರತಿವಾದಿ ನಂ.1 ರವರ ಕಡೆಯಿಂದ ರೂ.4,40,000/-ಗಳಿಗೆ ಕ್ರಯ ಕರಾರು ಪತ್ರ ಮಾಡಿಕೊಂಡು ಮುಂಗಡವಾಗಿ ರೂ.3,70,000/- ಹಣ ನೀಡಿದ್ದೆ ಎಂದು ಕ್ರಯ ಕರಾರು ಪತ್ರ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ರೂ.3,15,000/- ಮುಂಗಡ ಹಣ ನೀಡಿದ್ದೆ ಎಂದು ನುಡಿಯುತ್ತಾರೆ. ಕ್ರಯಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿ ಇರುತ್ತವೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೆ. ನಾನು ಹಾಜರುಪಡಿಸಿ ಗುರುತಿಸಿಕೊಂಡ ನಿಪಿ-2 ರ ಪಹಣಿ ಪತ್ರಿಕೆಯಲ್ಲಿ ದಾವಾ ಅನುಸೂಚಿ 1 ರ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿ ನಂ.1 ಮತ್ತು ರುದ್ರಪ್ಪ ಗುರುಸಿದ್ದಪ್ಪ ದಂಡಿನ್, ಶಿವಪ್ಪ ಗುರುಸಿದ್ದಪ್ಪ ದಂಡಿನ್, ವಿಠ್ಠಲ ರಾಮಪ್ಪ ದಂಡಿನ್, ಗುರುಶಿದ್ದ ರಾಮಪ್ಪ ದಂಡಿನ್, ರೇವಪ್ಪ ರಾಮಪ್ಪ ದಂಡಿನ್ ಅಸದಾರ ತಾಯಿ ಕಸ್ತೂರೆವ್ವ ಇವರ ಜಂಟಿ ಮಾಲಿಕತ್ವಕ್ಕೆ ಒಳಪಟ್ಟ ಜಮೀನು ಆಗಿತ್ತು ಎಂದರೆ ಸರಿ. ಅದರಂತೆ ದಾವಾ ಅನುಸೂಚಿ 2 ರ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿ ನಂ.1 ಮತ್ತು ರುದ್ರಪ್ಪ ಸಿದ್ದಪ್ಪ ದಂಡಿನ್, ಶಿವಪ್ಪ ಸಿದ್ದಪ್ಪ ದಂಡಿನ್, ವಿಠ್ಠಲ ರಾಮಪ್ಪ ದಂಡಿನ್, ಗುರುಶಿದ್ದಪ್ಪ ರಾಮಪ್ಪ ದಂಡಿನ್ ರವರ ಜಂಟಿ ಮಾಲಿಕತ್ವಕ್ಕೆ ಒಳಪಟ್ಟ ಜಮೀನು ಆಗಿತ್ತು ಎಂದರೆ ಸರಿ. ನಿಪಿ-3 ರಲ್ಲಿ ಅವರೆಲ್ಲರ ಹೆಸರುಗಳು ಜಂಟಿಯಾಗಿ ಬರುತ್ತಿತ್ತು ಎಂದರೆ ಸರಿ. ನಿಪಿ-4 ರ ಪ್ರಕಾರವೂ ಸಹ ದಾವಾ ಅನುಸೂಚಿ 3 ರ ಸ್ವತ್ತಿನಲ್ಲಿ ಮೇಲಿನ ವ್ಯಕ್ತಿಗಳ ಜಂಟಿ ಮಾಲಿಕತ್ವದ ಜಮೀನು ಆಗಿರುವ ಕುರಿತು ಉಲ್ಲೇಖ ಇದೆ ಎಂದರೆ ಸರಿ. ಪ್ರತಿವಾದಿ ನಂ.1 ರವರನ್ನು ಹೊರತುಪಡಿಸಿ ಉಳಿದ ಆತನ

ಕುಟುಂಬ ಸದಸ್ಯರು ನನಗೆ ಕ್ರಯ ಕರಾರುಪತ್ರ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿ. ಪ್ರತಿವಾದಿ ನಂ.1 ರವರಿಗೆ ವಾಟ್ನಿ ಮೂಲಕ ದಾವಾ ಅನುಸೂಚಿ ಸ್ವತ್ತುಗಳು ಬಂದಿರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ವಾಟ್ನಿ ಮಾಡಿಕೊಂಡು ಖರೀದಿ ಹಾಕಿ ಕೊಡುತ್ತೇನೆ ಎಂದು ತಿಳಿಸಿದ್ದ ಎಂದು ನುಡಿಯುತ್ತಾರೆ. ಸದರಿ ಸಂಗತಿ ನಾನು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರಿಗೆ ಮಾತ್ರ ದಾವಾ ಅನುಸೂಚಿ 1 ರಿಂದ 3 ರ ಸ್ವತ್ತುಗಳ ಮೇಲೆ ವೈಯಕ್ತಿಕವಾಗಿ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಅನುಸೂಚಿ 1 ರಿಂದ 3 ಜಮೀನುಗಳ ಕ್ಷೇತ್ರ ಹೊಂದಾಣಿಕೆ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ರವರು ಸರಿ ಮಾಡಿಕೊಡುತ್ತೇನೆ ಎಂದು ತಿಳಿಸಿದ್ದ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರವರ ಜಮೀನನ್ನು ಎತ್ತಿಹಾಕಬೇಕು ಎನ್ನುವ ಉದ್ದೇಶದಿಂದ ಉದ್ದೇಶ ಪೂರ್ವಕವಾಗಿ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಪ್ರತಿವಾದಿ ನಂ.1 ರವರಿಗೆ ವಂಚಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.